

## ಬದ್ಧತೆಯೇ 'ಕವಚ'

ವಿಭಿನ್ನ ಪಾತ್ರಗಳಲ್ಲಿ ನಟಿಸುವುದರಲ್ಲಿ ಸಿದ್ಧಹಸ್ತರಾದ ಶಿವರಾಜ್‌ಕುಮಾರ್ ಈ ಬಾರಿ ಕುರುಡನ ಪಾತ್ರದಲ್ಲಿ ನಟಿಸಿದ್ದಾರೆ. ಚಿತ್ರದ ಹೆಸರು 'ಕವಚ'. ಮಲಯಾಳಂನ 'ಒಪ್ಪಂ' ಚಿತ್ರ ಕನ್ನಡದಲ್ಲಿ 'ಕವಚ' ಆಗಿದೆ. ಮೂಲ ಚಿತ್ರದಲ್ಲಿ ಮೋಹನ್‌ಲಾಲ್ ನಟಿಸಿದ್ದ ಪಾತ್ರವನ್ನು ಕನ್ನಡದಲ್ಲಿ ಶಿವಣ್ಣ ನಟಿಸಿದ್ದಾರೆ. ಚಿತ್ರದ ಕಥೆ ಹಾಗೂ ಪಾತ್ರ ಮನಸ್ಸಿಗೆ ಹತ್ತಿರವಾದ ಕಾರಣದಿಂದಾಗಿ ರೀಮೇಕ್ ಚಿತ್ರಗಳಲ್ಲಿ ನಟಿಸುವುದಿಲ್ಲ ಎನ್ನುವ ತಮ್ಮ ನಿರ್ಧಾರವನ್ನು ಸಡಿಲಿಸಿ ಈ ಚಿತ್ರದಲ್ಲಿ ನಟಿಸಿದ್ದಾರೆ.

ಇನ್ನುಮುಂದೆ ಕೂಡ ಒಳ್ಳೆಯ ಕಥೆಗಳು ದೊರೆತಲ್ಲಿ ರೀಮೇಕ್ ಚಿತ್ರಗಳು ಅಡ್ಡಿಯಿಲ್ಲ ಎನ್ನುವ ಸೂಚನೆಯನ್ನು ಶಿವರಾಜ್ ನೀಡಿದ್ದಾರೆ. ಜಿ.ವಿ.ಆರ್. ವಾಸು 'ಕವಚ' ಚಿತ್ರದ ನಿರ್ದೇಶಕರು. ಊಟಿಯಲ್ಲಿ ಚಿತ್ರೀಕರಣ ಮುಗಿಸಿಕೊಂಡು ಬೆಂಗಳೂರಿಗೆ ಬಂದಿರುವ ವಾಸು ಬಳಗ, ಬೆಂಗಳೂರಿನ ಕಂಠೀರವ ಸ್ಟುಡಿಯೊದಲ್ಲಿ ಕೆಲವು ದೃಶ್ಯಗಳ ಚಿತ್ರೀಕರಣ ನಡೆಸುವ ಮೂಲಕ ಶೂಟಿಂಗ್ ಮುಗಿಸಿದೆ. ಮೈಸೂರು, ಮಡಿಕೇರಿಗಳಲ್ಲಿ ಕೂಡ ಚಿತ್ರೀಕರಣ ನಡೆದಿದೆಯಂತೆ.

ಕುರುಡನ ಪಾತ್ರವಾದರೂ ಚಿತ್ರದಲ್ಲಿ ಶಿವಣ್ಣನ ಪಾತ್ರಕ್ಕೆ ಸಾಹಸ ದೃಶ್ಯಗಳಿವೆ. ಅಂತರಂಗದ ದೃಷ್ಟಿ ಹಾಗೂ ವಾಸನೆ–ಸಪ್ಪಳಗಳನ್ನು ಗ್ರಹಿಸಿ ನಾಯಕ ಹೋರಾಡುತ್ತಾನಂತೆ. ಕುರುಡನಂತೆ ನಟಿಸುವ ಸವಾಲನ್ನು ಶಿವಣ್ಣ ಖುಷಿಯಿಂದಲೇ ಅನುಭವಿಸಿದ್ದಾರೆ. 'ಮೋಹನ್‌ಲಾಲ್ ಪಾತ್ರಕ್ಕೆ ಶೇ. 30ರಷ್ಟು ನ್ಯಾಯವನ್ನು ಒದಗಿಸುವುದು ಮಾತ್ರ ನನಗೆ ಸಾಧ್ಯವಾಗಿದೆ' ಎನ್ನುವ ವಿನಯ ಅವರದು. ಲಕ್ಷ್ಮಿ ಹೆಗಡೆ, ವಸಿಷ್ಠಸಿಂಹ, ಗಿರಿಜಾ ಲೋಕೇಶ್, ರವಿಕಾಳೆ, ಕೃತಿಕಾ ಹಾಗೂ ರಮೇಶ್‌ಭಟ್ ತಾರಾಗಣದಲ್ಲಿರುವ ಪ್ರಮುಖರು.



## ಅಜ್ಜಿ ಕನಸು ಮೊಮ್ಮಗಳಿಂದ ನನಸು

'ಪುಟ್ಟರಾಜು' ಸಿನಿಮಾದ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸುತ್ತಿರುವ ಜಯಶ್ರೀ ಆರಾಧ್ಯ ಅವರ ಮನಸ್ಸನ್ನು ಚೊಚ್ಚಿಲ ಸಿನಿಮಾ ತೆರೆಕಾಣುತ್ತಿರುವ ಪುಳಕದ ಜೊತೆಗೆ ಅಜ್ಜಿಯ ಆಸೆಯನ್ನು ಈಡೇರಿಸುತ್ತಿರುವ ಧನ್ಯತಾಭಾವವೂ ಆವರಿಸಿದೆ. ಆ.10ರಂದು 'ಪುಟ್ಟರಾಜು' ತೆರೆ ಕಾಣುತ್ತಿದೆ.

'ಉಪೇಂದ್ರ' ಸಿನಿಮಾ ನೋಡಿದವರು ನಾಯಕನಿಗೆ ಸವಾಲೆಸೆಯುವ ಮಾರಿಮುತ್ತು ಪಾತ್ರವನ್ನು ಮರೆಯಲಾರರು. ಆ ಪಾತ್ರವನ್ನು ನಿರ್ವಹಿಸಿದ್ದ ಸರೋಜಮ್ಮ ಅವರ ಮೊಮ್ಮಗಳು ಜಯಶ್ರೀ. ತಮ್ಮಂತೆ ತಮ್ಮ ಕುಟುಂಬದಿಂದ ಮತ್ತೆ ಯಾರಾದರೂ ಚಿತ್ರರಂಗದಲ್ಲಿ ಗುರ್ತಿಸಿಕೊಳ್ಳಬೇಕು ಎನ್ನುವ ಸರೋಜಮ್ಮನವರ ಆಸೆ ಈಗ ಮೊಮ್ಮಗಳ ಮೂಲಕ ನನಸಾಗುತ್ತಿದೆ. ಚೊಚ್ಚಿಲ ಸಿನಿಮಾದಲ್ಲಿ ಒಳ್ಳೆಯ ಪಾತ್ರ ಸಿಕ್ಕಿರುವ ಖುಷಿ ಜಯಶ್ರೀ ಅವರದು.

'ಪುಟ್ಟರಾಜು' ಸಿನಿಮಾದ ನಿರ್ದೇಶನ ಸಹದೇವ ಅವರದು. ಹದಿಹರೆಯದ ಹುಡುಗ ಹುಡುಗಿಯರ ಕಥೆಯನ್ನವರು ಚಿತ್ರದಲ್ಲಿ ಸೊಗಸಾಗಿ ನಿರೂಪಿಸಿದ್ದಾರಂತೆ. ಕಾಲೇಜು ಕ್ಯಾಂಪಸ್‌ನ ಸೌಂದರ್ಯ ಹಾಗೂ ಹದಿಹರೆಯದ ತವಕ ತಲ್ಲಣಗಳು 'ಪುಟ್ಟರಾಜು' ಚಿತ್ರದ ಕಥೆ. ನಿಜಜೀವನದ ಪ್ರಸಂಗಗಳನ್ನೇ ಆಯ್ದುಕೊಂಡು ನಿರ್ದೇಶಕರು ಕಥೆಯನ್ನು ರೂಪಿಸಿದ್ದಾರಂತೆ. ಖೋ ಖೋ ಆಟ ಚಿತ್ರದಲ್ಲಿ ಪ್ರಮುಖ ಪಾತ್ರ ವಹಿಸಿದೆಯಂತೆ. ಆಟದ ಸ್ಪರ್ಧೆಯ ರೂಪದಲ್ಲಿ ಹಾಗೂ ಸಂಬಂಧಗಳನ್ನು ರೂಪಿಸುವುದಕ್ಕೆ ವೇದಿಕೆಯಾಗಿ ಖೋ ಖೋ ಚಿತ್ರದಲ್ಲಿ ಕಾಣಿಸಿಕೊಂಡಿದೆ.

ಅಮಿತ್ ಚಿತ್ರದ ನಾಯಕ. ಜಯಶ್ರೀ ಜೊತೆಗೆ ಸುಶ್ಮಿತಾ ಎನ್ನುವ ಮೈಸೂರಿನ ಹುಡುಗಿ ಕೂಡ ಚಿತ್ರದಲ್ಲಿ ನಾಯಕಿಯಾಗಿ ನಟಿಸಿದ್ದಾರೆ. ಹೊಸ ತಲೆಮಾರಿನ ಪ್ರೇಕ್ಷಕರಿಗೆ ಸಿನಿಮಾ ಇಷ್ಟವಾಗಲಿದೆ ಎನ್ನುವ ನಿರೀಕ್ಷೆ ಚಿತ್ರತಂಡದ್ದು.